| PUBLICATION NAME : | Suvarna Times |
| --- | --- |
| EDITION : | Karnataka |
| DATE : | 05/09/2023 |
| PAGE : | 5 |

# ತರಬೇತಿ ನೀಡುವಲ್ಲಿ ಇಡಿಐಐ ಯಶಸ್ವಿ

**ಬೆಂಗಳೂರು:** ಉದ್ಯಮಶೀಲತೆಯು ಪ್ರಜ್ಞಾಪೂರ್ವಕ ವೃತ್ತಿಜೀವನದ ಆಯ್ಕೆಯಾಗಿದೆ ಎಂಬ ಗ್ರಹಿಕೆಯೊಂದಿಗೆ 1983ರಲ್ಲಿ ಸ್ಥಾಪನೆಯಾದ ಭಾರತೀಯ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ (ಇಡಿಐಐ) ಇಂದು ಉದ್ಯಮಶೀಲತೆ ಶಿಕ್ಷಣ, ತರಬೇತಿ, ಸಂಶೋಧನೆ, ಸಂಸ್ಥೆ ನಿರ್ಮಾಣ, ಎಂಎಸ್‌ಎಂಇ ಬೆಳವಣಿಗೆ, ನಾವೀನ್ಯತೆಗಳು ಮತ್ತು ಇನ್‌ಕ್ಯುಬೇಷನ್‌ನಲ್ಲಿ ಅಗ್ರಗಣ್ಯ ರಾಷ್ಟ್ರೀಯ ಸಂಪನ್ಮೂಲ ಸಂಸ್ಥೆ ಎನಿಸಿದೆ. ಸಂಸ್ಥೆಯು ನೀತಿ ನಿರೂಪಕರು, ಶಿಕ್ಷಣ ತಜ್ಞರು, ಅಧಿಕಾರಿಗಳು, ಉದ್ಯಮಿಗಳನ್ನು ಒಳಗೊಂಡ ಆಡಳಿತ ಮಂಡಳಿಯಿಂದ ನಿಯಂತ್ರಿಸಲ್ಪಡುತ್ತದೆ. ಐಡಿಬಿಐ ಬ್ಯಾಂಕ್ ಲಿಮಿಟೆಡ್‌ನ ಎಂಡಿ ಮತ್ತು ಸಿಇಒ ಈ ಮಂಡಳಿಯ ಮುಖ್ಯಸ್ಥರಾಗಿದ್ದಾರೆ. 1983ರಿಂದ, ಇಡಿಐಐ ಸುದೀರ್ಘ ಹಾದಿಯನ್ನು ಕ್ರಮಿಸಿ ಬಂದಿದೆ. ಇಂದು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದಿಂದ ಭಾರಿ ಮೆಚ್ಚುಗೆ ಪಡೆದಂತ ಉತ್ಕೃಷ್ಟತಾ ಕೇಂದ್ರವೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

'ಇಡಿಐಐ'ನ ಮಹಾನಿರ್ದೇಶಕ ಡಾ.ಸುನಿಲ್ ಶುಕ್ಲಾ ಮಾತನಾಡಿ, ಕುಶಲಕರ್ಮಿಗಳು, ನೇಕಾರರು, ಮಹಿಳೆಯರು, ನವೋದ್ಯಮಗಳು ಹಾಗೂ ನಿರುದ್ಯೋಗಿಗಳಿಗೆ ಉದ್ಯಮಶೀಲತೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡುವಲ್ಲಿ 'ಇಡಿಐಐ' ಯಶಸ್ವಿಯಾಗಿದೆ. ಭೌತಿಕ ಮತ್ತು ಸಾಮಾಜಿಕ ಯೋಗಕ್ಷೇಮಕ್ಕಾಗಿ ಹೊಸ ಉದ್ಯಮಗಳನ್ನು ಸ್ಥಾಪಿಸಲು ಸಂಸ್ಥೆಯು ತಳಮಟ್ಟದಲ್ಲಿರುವವರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುತ್ತಿದೆ. ನಾವು ಗಮನಾರ್ಹ ಫಲಿತಾಂಶಗಳೊಂದಿಗೆ ಪ್ರಗತಿ ಹಾದಿಯಲ್ಲಿ ಮುಂದುವರಿಯುತ್ತೇವೆ ಎಂದು ನನಗೆ ಸಂತೋಷವಾಗಿದೆ," ಎಂದು ಹೇಳಿದರು.